

بسم اللهِ الرّحمٰن الرّحيم

ತಹ್ರೀಕ್ ಜದೀದಿನ 92ನೇ ವರ್ಷದಲ್ಲಿ ನೀಡಲಾದ ಆರ್ಥಿಕ ತ್ಯಾಗಗಳ ಪ್ರಸ್ತಾಪ ಮತ್ತು 93ನೇ ವರ್ಷದ ಆರಂಭದ ಘೋಷಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–11–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: **ಲನ್ ತನಾಲೂಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**. ಅಂದರೆ, "ನಿಮಗೆ ಪ್ರಿಯವಾದ ವಸ್ತುಗಳಲ್ಲಿ ನೀವು ಖರ್ಚು ಮಾಡುವ ವರೆಗೂ ನೀವು ಖಂಡಿತವಾಗಿಯೂ ಒಳಿತನ್ನು ಪಡೆಯಲಾರಿರಿ."

ಒಂದು ಹದೀಸ್‌ನಲ್ಲಿ ಹೀಗೆ ವರದಿಯಾಗಿದೆ: ಈ ಆಯತ್ ಅವತೀರ್ಣವಾದಾಗ ಹಝ್ರತ್ ತಲ್‌ಹ(ರ) 'ಬೈರುಹಾ' ಎಂಬ ಹೆಸರಿನ ತಮ್ಮ ಅತ್ಯಂತ ಅಮೂಲ್ಯವಾದ ತೋಟವನ್ನು ನಬಿ(ಸ)ರ ಸೇವೆಯಲ್ಲಿ ಅರ್ಪಿಸಿ, "ಇದೇ ನನ್ನ ಅತ್ಯಂತ ಪ್ರಿಯ ಆಸ್ತಿಯಾಗಿದೆ" ಎಂದು ಹೇಳಿದರು. ಇದಲ್ಲದೆ ಆರ್ಥಿಕ ತ್ಯಾಗಕ್ಕಾಗಿ ಕರೆಯಲಾಗುವಾಗ ಸದಾ ಮುಂಚೂಣಿಯಲ್ಲಿರುತ್ತಿದ್ದ ಮತ್ತು ತಮ್ಮ ಸಂಪತ್ತನ್ನು ನಬಿ(ಸ)ರ ಸೇವೆಯಲ್ಲಿ ಅರ್ಪಿಸುತ್ತಿದ್ದ ಅನೇಕ ಸಹಾಬಿಯರ ಕುರಿತು ಹದೀಸ್‌ಗಳಲ್ಲಿ ಉಲ್ಲೇಖವಿದೆ; ಆ ಬೆಳಗುವ ನಕ್ಷತ್ರಗಳು ಇಂದಿಗೂ ನಮಗೆ ದಾರಿದೀಪವಾಗಿವೆ.

ಅನಂತರ ಅಲ್ಲಾಹನ ವಾಗ್ದಾನಗಳ ಪ್ರಕಾರ ಇಸ್ಲಾಮಿನ ಪುನರುಜ್ಜೀವನದ ಕಾಲ ಬಂದಾಗ ಹಝ್ರತ್ ಮಸೀಹ್ ಮೌಊದ್(ಅ)ರ ಕರೆಗೆ ಓಗೊಟ್ಟು ಸಹಾಬಿಯರು ತ್ಯಾಗಗಳನ್ನು ಮಾಡಿದರು. ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಸಹಾಬಿಯರಿಗೆ ಆ ತ್ಯಾಗಗಳ ಬಗ್ಗೆ ಚೆನ್ನಾಗಿ ತಿಳಿಸಿಕೊಟ್ಟಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಒಂದು ಕಡೆ ಹೀಗೆ ಹೇಳುತ್ತಾರೆ: 'ವ್ಯರ್ಥವಾದ ಮತ್ತು ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಯಾವುದೇ ವ್ಯಕ್ತಿ ತಾನು ಒಳಿತು ಮಾಡಿದ್ದಾಗಿ ವಾದಿಸಲು ಸಾಧ್ಯವಲ್ಲ. ಪುಣ್ಯದ ಬಾಗಿಲು ಕಿರಿದಾಗಿದೆ. ಹಾಗಾಗಿ ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಯಾರೂ ಅದರಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಬೇಕು. ಏಕೆಂದರೆ, **"ಲನ್ ತನಾಲೂಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್"** ಎಂಬುದು ಪವಿತ್ರ ಖುರ್‌ಆನಿನ ಸ್ಪಷ್ಟವಾದ ಆದೇಶವಾಗಿದೆ. ಅತ್ಯಂತ ಪ್ರಿಯ ಮತ್ತು ಇಷ್ಟಕರವಾದ ವಸ್ತುಗಳನ್ನು ಖರ್ಚು ಮಾಡುವ ತನಕ ಅಲ್ಲಾಹನ ಮಿತ್ರ ಮತ್ತು ಪ್ರಿಯನೆಂಬ ದರ್ಜೆ ಲಭಿಸಲು ಸಾಧ್ಯವಿಲ್ಲ. ನೀವು ಕಷ್ಟಗಳನ್ನು ಸಹಿಸಿಕೊಳ್ಳಲು ಇಚ್ಛಿಸದಿದ್ದರೆ ಮತ್ತು ನೈಜ ಒಳಿತನ್ನು ಅಳವಡಿಸಿಕೊಳ್ಳಲು ಬಯಸದಿದ್ದರೆ, ನೀವು ಹೇಗೆ ಯಶಸ್ವಿ ಮತ್ತು ಗುರಿ ಮುಟ್ಟುವವರಾಗಲು ಸಾಧ್ಯ? ಸಹಾಬಿಯರು ಆ ಉನ್ನತ ಸ್ಥಾನವನ್ನು ಸುಮ್ಮನೆ ಪಡೆದುಕೊಂಡರೇ? ಸತ್ಯವೇನೆಂದರೆ, ತಾತ್ಕಾಲಿಕ ಕಷ್ಟಗಳನ್ನು ಸಹಿಸಿಕೊಳ್ಳದೇ ನೈಜ ಸಂತೋಷಕ್ಕೆ ಕಾರಣವಾದ ದೇವನ ಸಂಪ್ರೀತಿಯನ್ನು ಗಳಿಸಲು ಸಾಧ್ಯವಿಲ್ಲ.'

ಹುಝೂರ್ ಹೇಳಿದರು: ಇದು ಹಝ್ರತ್ ಮಸೀಹ್ ಮೌಊದ್(ಅ) ಜಮಾಅತ್‌ನಲ್ಲಿ ಹುಟ್ಟುಹಾಕಲು ಪ್ರಯತ್ನಿಸಿದ ಸ್ಫೂರ್ತಿಯಾಗಿದೆ. ಅವರ ಸಹಾಬಿಯರು ತ್ಯಾಗಗಳಲ್ಲಿ ಎಷ್ಟೊಂದು ಮುನ್ನಡೆ ಪಡೆದರೆಂದರೆ, ಅವರಿಗೆ ಹೀಗೆ ಹೇಳಬೇಕಾಯಿತು: 'ನಾನು ನೋಡುತ್ತಿದ್ದೇನೆ, ನಮ್ಮ ಜಮಾಅತಿಗೆ ಸೇರ್ಪಡೆಗೊಂಡಿರುವವರ ಪೈಕಿ, ತಮ್ಮ ದೇಹದ ಮೇಲೆ ಉಡುಪು ಕೂಡ ಕಷ್ಟದಿಂದ ಹೊಂದಿರುವವರು, ಕಷ್ಟದಿಂದ ಚಾದರ ಅಥವಾ ಪೈಜಾಮ ಹೊಂದಿರುವವರು ಇದ್ದಾರೆ; ಅವರ ನಿಷ್ಠೆ, ವಿಶ್ವಾಸ, ಭಕ್ತಿ ಮತ್ತು ಪ್ರೀತಿಯನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ.' ಹಝ್ರತ್ ಮಸೀಹ್ ಮೌಊದ್(ಅ) ತಂದ ಬದಲಾವಣೆಗೆ ಬೇರಾವ ಉದಾಹರಣೆಯೂ ಕಾಣಸಿಗುವುದಿಲ್ಲ.

ಇಂದು ತ್ಯಾಗದ ಸ್ಫೂರ್ತಿಯ ಅರಿವು ಅಹ್ಮದಿಯರಿಗೆ ಇರುವಷ್ಟು ಬೇರಾರಿಗೂ ಇಲ್ಲ. ಇಂದು ನಮಗೆ ಜಮಾಅತಿನಲ್ಲಿ ಇಂತಹ ಉದಾಹರಣೆಗಳು ಕಾಣಸಿಗುತ್ತವೆ. ಖಲೀಫತುಲ್ ಮಸೀಹ್‌ರನ್ನು ಇಂದಿನ ತನಕ ನೇರವಾಗಿ ಕಂಡಿರದ ಅನೇಕರಿದ್ದಾರೆ. ಅವರು ಎಂ.ಟಿ.ಎ.ದಲ್ಲಿ ಮಾತ್ರ ನೋಡಿರುತ್ತಾರೆ ಅಥವಾ ಧ್ವನಿಯನ್ನು ಕೇಳಿರುತ್ತಾರೆ. ಆದರೆ ಅವರು ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಮುನ್ನಡೆಯುತ್ತಲೇ ಇದ್ದಾರೆ. ಲೋಕಕ್ಕೆ ಈ ಜನರ ಬಗ್ಗೆ ತಿಳಿದಿಲ್ಲ, ಮೇಲ್ನೋಟಕ್ಕೆ ಇವರು ಕಡಿಮೆ ಶಿಕ್ಷಣ ಪಡೆದವರಾಗಿದ್ದಾರೆ; ಆದರೆ ಪವಿತ್ರ ಖುರ್‌ಆನಿನ ಬೋಧನೆಯ ಅರಿವನ್ನು ಹೊಂದಿದ್ದಾರೆ ಮತ್ತು ಅದನ್ನು ಪಾಲಿಸಲು ಪ್ರಯತ್ನಿಸುತ್ತಾರೆ.

ಒಂದು ಉದಾಹರಣೆ ಗವಾದೀಲೋಪ್‌ನ ಓರ್ವ ನವ ಅಹ್ಮದಿಯದ್ದು ಆಗಿದೆ. ಅವರು ಇತ್ತೀಚೆಗಷ್ಟೇ ಬ್ರಿಟನಿನ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದರು ಮತ್ತು ನನ್ನನ್ನು ಸಹ ಭೇಟಿಯಾಗಿದ್ದರು. ಇಲ್ಲಿ ಜಮಾಅತ್ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಿದ್ದರು. ಜಮಾಅತಿನ ಆರ್ಥಿಕ ವ್ಯವಸ್ಥೆ ಸಹ ಇದೆ ಮತ್ತು ಈ ರೀತಿಯಲ್ಲಿ ಜನರು ಚಂದಾ ನೀಡುತ್ತಾರೆ ಹಾಗೂ ಅದರಿಂದ ಇಸ್ಲಾಮಿನ ಪ್ರಚಾರಕ್ಕಾಗಿ ಏನೆಲ್ಲ ಕೆಲಸಗಳಾಗುತ್ತಿವೆ ಎಂಬುದನ್ನು ಅವರಿಗೆ ವಿವರಿಸಿ ಕೊಡಲಾಯಿತು. ಈ ಸಂಪತ್ತನ್ನು ಹೇಗೆ ಮತ್ತು ಎಲ್ಲೆಲ್ಲ ಖರ್ಚು ಮಾಡಲಾಗುತ್ತದೆ ಎಂದು ಅವರಿಗೆ ತಿಳಿಸಿದಾಗ, ಅವರು ಬಹಳ ಸಂತೋಷವನ್ನು ವ್ಯಕ್ತಪಡಿಸಿದರು. 'ಜಮಾಅತ್ ಈ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಹೇಗೆ ಖರ್ಚು ಮಾಡುತ್ತದೆ ಎಂಬುದನ್ನು ನಾನು ಜಲ್ಸ ಸಾಲಾನದಲ್ಲಿ ಕಣ್ಣಾರೆ ಕಂಡಿದ್ದೇನೆ.' ಎಂದು ಅವರು ಹೇಳಿದರು. ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: 'ಈ ಘಟನೆಯ ಮತ್ತೊಂದು ವಿಶ್ವಾಸವರ್ಧಕ ಆಯಾಮವೇನೆಂದರೆ, ತಹ್ರೀಕ್ ಜದೀದಿನ ಚಂದಾದ ಕೊನೆಯ ದಿನವಾದಾಗ, ಅವರು ನನ್ನ ಬಳಿ ಬಂದು ಹೀಗೆ ಹೇಳಿದರು: ನನಗೆ ಆರು ವರ್ಷದ ಮಗನಿದ್ದಾನೆ. ಇದು ಅವನ ಕಡೆಯಿಂದ ಆರು ಯೂರೋ ಚಂದಾವಾಗಿದೆ. ಜಮಾಅತ್ ಹೇಗೆ ತ್ಯಾಗಗಳನ್ನು ಮಾಡುತ್ತದೆ ಎಂಬುದನ್ನು ನಾನು ನನ್ನ ಮಗನಿಗೆ ತಿಳಿಸುತ್ತಿದ್ದೆ. ನಾನು ಅವನನ್ನು ಪಾರ್ಕ್‌ಗೆ ಕರೆದುಕೊಂಡು ಹೋಗಿ ಉಯ್ಯಾಲೆಯ ಟಿಕೆಟ್ ಪಡೆಯಲು ಮುಂದಾದಾಗ, ಅವನು ಹೇಳಿದನು: ನಾನು ಇಂದು ಉಯ್ಯಾಲೆಯಲ್ಲಿ ಕುಳಿತುಕೊಳ್ಳುವುದಿಲ್ಲ, ಬದಲಾಗಿ ಈ ಹಣವನ್ನು ನನ್ನ ಕಡೆಯಿಂದ ಅಲ್ಲಾಹನ ಮಾರ್ಗದಲ್ಲಿ ನೀಡಿರಿ. ಮೇಲ್ನೋಟಕ್ಕೆ ಇದು ಸಣ್ಣ ಮೊತ್ತವಾಗಿದೆ, ಆದರೆ ಆ ಮಗುವಿನ ಕಡೆಯಿಂದ ಬಹುದೊಡ್ಡ ತ್ಯಾಗವಾಗಿದೆ.'

ಗಿನಿಕೊನಾಕ್ರಿಯ ಒಂದು ಘಟನೆಯಿದೆ: ತೌಲಾ ಸಾಹಿಬ್ ಎಂಬ ಹೆಸರಿನ ಓರ್ವ ಅಹ್ಮದಿಯಿದ್ದಾರೆ, ಅವರು ಕಡು ಬಡವರು ಆಗಿದ್ದಾರೆ. ಅವರು ತಮ್ಮ ತಹ್ರೀಕ್ ಜದೀದ್ ಚಂದಾವನ್ನು ಮೂವತ್ತು ಸಾವಿರ ಫ್ರಾಂಕ್‌ಗಳೆಂದು ಬರೆಸಿದ್ದರು. ಅವರು ಹೇಳುತ್ತಾರೆ: "ನನ್ನ ಮಗಳ ಮದುವೆಯೂ ಇತ್ತು. ನಾನು ಅದಕ್ಕಾಗಿ ಹಣವನ್ನು ಕೂಡಿಟ್ಟಿದ್ದೆ. ಈ ಮಧ್ಯೆ ಮುಅಲ್ಲಿಮ್ ಸಾಹಿಬ್ ಚಂದಾ ಪಡೆಯಲು ಬಂದರು. ಮದುವೆಗಾಗಿ ಕೂಡಿಟ್ಟಿದ್ದ ಈ ಹಣವನ್ನು ನಾನು ಅವರಿಗೆ ನೀಡಿ, ಇದನ್ನು ಚಂದಾದಲ್ಲಿ ಸೇರಿಸಿಕೊಳ್ಳಿ ಎಂದು ಹೇಳಿದೆ. ತದನಂತರ ಅಲ್ಲಾಹನ ಎಂತಹ ಕೃಪೆ ಉಂಟಾಯಿತು ಎಂದರೆ, ಫ್ರಾನ್ಸ್‌ಗೆ ಹೋಗಲಿಕ್ಕಾಗಿ ಬಹುಕಾಲ ಮುಂಚೆ ಮನೆಯಿಂದ ಹೊರಟಿದ್ದ ನನ್ನ ಮಗನೊಬ್ಬನಿದ್ದನು, ಅವನ ಬಗ್ಗೆ ಯಾವುದೇ ಸುಳಿವು ಕೂಡ ಇರಲಿಲ್ಲ; ಎಷ್ಟರ ಮಟ್ಟಿಗೆಂದರೆ, ದಾರಿಯಲ್ಲಿ ಎಲ್ಲಾದರೂ ಅವನು ತೀರಿಹೋಗಿರಬಹುದು ಎಂದೇ ನಾವು ಭಾವಿಸಿದ್ದೆವು. ಇದ್ದಕ್ಕಿದ್ದಂತೆ ಒಂದು ದಿನ ಅವನ ಫೋನ್ ಕರೆ ಬಂತು ಮತ್ತು ಅವನು ತಾನು ಫ್ರಾನ್ಸ್ ತಲುಪಿದ್ದಾಗಿ ತಿಳಿಸಿದನು. ಅಲ್ಲದೆ, ಖರ್ಚುಗಳಿಗಾಗಿ ದೊಡ್ಡ ಮೊತ್ತವೊಂದನ್ನು ಕಳುಹಿಸುತ್ತಿದ್ದೇನೆ ಎಂದು ಕೂಡ ಹೇಳಿದನು. ಈ ಘಟನೆಯಿಂದ ನನ್ನ ಈಮಾನ್ ವರ್ಧಿಸಿತು. ಏಕೆಂದರೆ, ಚಂದಾದಿಂದಾಗಿ ಒಂದೆಡೆ ನನಗೆ ನನ್ನ ಮಗನ ಬಗ್ಗೆ ಗೊತ್ತಾಯಿತು ಮತ್ತು ಇನ್ನೊಂದೆಡೆ ಅಲ್ಲಾಹನು ಚಂದಾದ ಹಣವನ್ನು ಹಲವು ಪಟ್ಟು ಹೆಚ್ಚಿಸಿ ಹಿಂತಿರುಗಿಸಿದನು."

ಅರ್ಜೆಂಟೀನಾದ ಮುರಬ್ಬಿ ಸಾಹಿಬ್ ಬರೆಯುತ್ತಾರೆ: "ಓರ್ವ ನಿಷ್ಠಾವಂತ ಅಹ್ಮದಿಯಿದ್ದಾರೆ, ನಾಸಿರ್ ಆರ್ಕ್ಯೂನಸ್ ಸಾಹಿಬ್. ಅವರು ಅರ್ಜೆಂಟೀನಾದ ಮೊದಲ ಸ್ಥಳೀಯ ಅಹ್ಮದಿಯಾಗಿದ್ದಾರೆ. ದೇಶದ ಪ್ರಸಿದ್ಧ ಪತ್ರಕರ್ತರಾಗಿದ್ದರು, ಆದರೆ ಕೆಲವು ವರ್ಷಗಳಿಂದ ರೋಗಿಯಾಗಿ ಇದ್ದಾರೆ. ಅವರ ಕುಟುಂಬ ನಿರಂತರವಾಗಿ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ. ಕೆಲವೊಮ್ಮೆ ಔಷಧಿಗಳಿಗೂ ಹಣವಿರುವುದಿಲ್ಲ. ನಾನು ಅವರೊಡನೆ ಹೇಳಿದೆ, ನಿಮ್ಮ ಪರಿಸ್ಥಿತಿ ಚಂದಾ ನೀಡುವಂತಿಲ್ಲ, ಆದರೆ ಬರ್ಕತಿಗಾಗಿ ಏನಾದರೂ ನೀಡಬಯಸಿದರೆ ನೀಡಿರಿ. ಈ ಮಾತನ್ನು ಕೇಳಿದ ಅವರು ಕೆಲವು ದಿನಗಳ ನಂತರ ಸ್ವತಃ ಸಂಪರ್ಕಿಸಿ, 'ನಾನು ಜಮಾಅತಿನ ಖಾತೆಗೆ ಚಂದಾದ ಹಣವನ್ನು ಕಳುಹಿಸಿದ್ದೇನೆ' ಎಂದು ತಿಳಿಸಿದರು. ಪರಿಶೀಲಿಸಿದಾಗ, ಅವರು ಇಪ್ಪತ್ತೈದು ಡಾಲರ್‌ಗಳ ಮೊತ್ತವನ್ನು ಕಳುಹಿಸಿದ್ದರು. ಇದು ಸಣ್ಣ ಮೊತ್ತವಾಗಿದೆ, ಆದರೆ ಅವರ ವೈಯಕ್ತಿಕ ಪರಿಸ್ಥಿತಿಗಳನ್ನು ಗಮನಿಸಿದರೆ ಇದು ಅಸಾಧಾರಣ ತ್ಯಾಗವಾಗಿತ್ತು."

ಬೆನಿನ್‌ನ ಒಂದು ಘಟನೆಯಿದೆ: ಓರ್ವ ನವ ಅಹ್ಮದಿಯಿದ್ದಾರೆ, ಅವರು ಕ್ರೈಸ್ತ ಧರ್ಮದಿಂದ ಅಹ್ಮದಿಯತ್ ಸ್ವೀಕರಿಸಿದ್ದರು. ಅವರದ್ದೊಂದು ಚಿಕ್ಕ ಅಂಗಡಿಯಿದೆ. ಅವರು ಹೇಳುತ್ತಾರೆ: "ನನ್ನ ಬಳಿ ಹತ್ತು ಸಾವಿರ ಫ್ರಾಂಕ್ ಇತ್ತು. ನನ್ನ ಮಗಳು ನನ್ನ ಬಳಿ ಬಂದು ಹೀಗೆ ಹೇಳಿದಳು: ಸ್ಕೂಲ್ ಫೀಸ್ ಪಾವತಿಸದ ಕಾರಣ ಶಾಲಾ ಆಡಳಿತ ಮಂಡಳಿಯು ಅವಳನ್ನು ಶಾಲೆಯಿಂದ ಹೊರಹಾಕಿದೆ. ನಾನು ಶಾಲಾ ಶುಲ್ಕ ಪಾವತಿಸಲು ಸಿದ್ಧತೆ ನಡೆಸುತ್ತಿದ್ದೆ. ಅಷ್ಟರಲ್ಲಿ ತಹ್ರೀಕ್ ಜದೀದಿನ ಚಂದಾ ವಸೂಲು ಮಾಡಲು ಮುಅಲ್ಲಿಮ್ ಸಾಹಿಬ್ ಬಂದರು. ನಾನು ಆ ಹಣವನ್ನು ಚಂದಾದಲ್ಲಿ ನೀಡಿದೆ. ದೇವನ ಎಂತಹ ಕೃಪೆಯಾಯಿತೆಂದರೆ, ಅಂದು ಎಷ್ಟೊಂದು ಗ್ರಾಹಕರು ಬಂದರೆಂದರೆ, ಎರಡು ಲಕ್ಷ ಫ್ರಾಂಕ್ ಬೆಲೆಯ ವಸ್ತುಗಳು ಮಾರಾಟವಾದವು ಮತ್ತು ಬಹಳಷ್ಟು ಲಾಭ ಬಂತು. ಆದುದರಿಂದ ನಾನು ಅದೇ ದಿನ ಸ್ಕೂಲ್ ಫೀಸನ್ನು ಕೂಡ ಪಾವತಿಸಿದೆ."

ಅನೇಕ ಜನರು ಇಂತಹ ಘಟನೆಗಳನ್ನು ಬರೆಯುತ್ತಾರೆ. ನಾವು ಆರ್ಥಿಕ ತ್ಯಾಗಗಳನ್ನು ಮಾಡುತ್ತೇವೆ ಮತ್ತು ದುಆ ಮಾಡುತ್ತೇವೆ ಎಂದು ಅವರು ಹೇಳುತ್ತಾರೆ. ನನಗೂ ದುಆಗಾಗಿ ಬರೆಯುತ್ತಿರುತ್ತಾರೆ. ಈ ತ್ಯಾಗಗಳಿಂದಾಗಿ ಅವರ ಹದಗೆಟ್ಟ ಕೆಲಸಗಳು ಸರಿಯಾಗುತ್ತವೆ, ಮಕ್ಕಳ ಸುಧಾರಣೆಯಾಗುತ್ತದೆ.'

ಕೆನಡಾದ ತಹ್ರೀಕ್ ಜದೀದ್ ಲಜ್ನ ಇಮಾಯಿಲ್ಲಾದ ನ್ಯಾಷನಲ್ ಸೆಕ್ರೆಟರಿ ಬರೆಯುತ್ತಾರೆ: ಓರ್ವ ಲಜ್ನ ಸದಸ್ಯೆ ತನ್ನ ಹೆಸರನ್ನು ಬಹಿರಂಗಪಡಿಸದೆ ಹೀಗೆ ತಿಳಿಸುತ್ತಾರೆ: "ನಾನು ಯಾವಾಗಲೂ ನನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಚಂದಾವನ್ನು ಪಾವತಿಸಿದ್ದೇನೆ. ಕಳೆದ ವರ್ಷ ಖಲೀಫತುಲ್ ಮಸೀಹ್ ನೀಡಿದ ಭಾಷಣದಲ್ಲಿ, ಹಝ್ರತ್ ಅಮ್ಮಾಜಾನ್(ರ)ರ ಉದಾಹರಣೆಯನ್ನು ನೀಡಲಾಗಿತ್ತು; ಎಂದರೆ, ಅವರು ವರ್ಷದ ಆರಂಭದಲ್ಲೇ ತಮ್ಮ ವಾಗ್ದಾನವನ್ನು ಬರೆಸಿ, ಅದನ್ನು ಕೂಡಲೇ ಅದನ್ನು ಪೂರೈಸುತ್ತಿದ್ದರು. ನಾನು ಸಹ ಅದನ್ನು ಪಾಲಿಸಬೇಕೆಂದು ಯೋಚಿಸಿ ನನ್ನ ವಾಗ್ದಾನವನ್ನು ಬರೆಸಿದ ಕೂಡಲೇ ಪಾವತಿಸಿದೆ; ಅದು ಎರಡು ತಿಂಗಳ ವೇತನಕ್ಕೆ ಸಮನಾಗಿತ್ತು. ನಂತರ ಅಲ್ಲಾಹನ ಅನುಗ್ರಹಗಳನ್ನು ನೋಡಿದೆ, ಯಾವುದೋ ಅಡಗಿದ ನಿಧಿ ಸಿಕ್ಕಿದಂತೆ ಆಯಿತು. ತಡೆಯಾಗಿ ನಿಂತಿದ್ದ ಅನೇಕ ಕೆಲಸಗಳು ಪೂರ್ತಿಯಾದವು. ಒಂದು ಮನೆ ಬಹಳ ಒಳ್ಳೆಯ ಬೆಲೆಗೆ ಮಾರಾಟವಾಯಿತು. ಬೇರೊಂದು ಕಡೆ ಹೊಸ ಮನೆ ಖರೀದಿಸುವ ಸೌಭಾಗ್ಯ ಲಭಿಸಿತು."

ರಷ್ಯಾದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: ಓರ್ವ ನಿಷ್ಠಾವಂತ, ತ್ಯಾಗ ಮಾಡುವ ಅಹ್ಮದಿಯಿದ್ದಾರೆ. ಅವರು ಒಂದು ದಿನ ಜುಮುಅ ನಮಾಝ್ ನಂತರ ಒಂದು ಒಳ್ಳೆಯ ಮೊತ್ತವೊಂದನ್ನು ನನಗೆ ನೀಡಿದರು. "ನಿಮ್ಮ ಯಾವುದೇ ಚಂದಾ ಬಾಕಿ ಉಳಿದಿಲ್ಲ" ಎಂದು ನಾನು ಹೇಳಿದೆ. ಆಗ ಅವರು ಹೀಗೆ ಹೇಳಿದರು: "ನಾನು ನನ್ನ ತಾಯ್ನಾಡಿಗೆ ಹೋಗಿದ್ದೆ ಮತ್ತು ಮರಳಿ ಮಾಸ್ಕೋಗೆ ಬಂದಾಗ, ಇತರ ದೇಶದ ಪ್ರಯಾಣಿಕರೊಂದಿಗೆ ವಿಮಾನ ನಿಲ್ದಾಣದಲ್ಲಿ ನನ್ನನ್ನು ಕೂಡ ತಡೆಯಲಾಯಿತು. ಈ ಹಿಂದೆಯೂ ಎಮಿಗ್ರೇಶನ್ ಅಧಿಕಾರಿಗಳು ಬಹಳ ಸಣ್ಣ–ಪುಟ್ಟ ವಿಷಯಗಳಿಗಾಗಿ ಜನರನ್ನು ತಡೆದು ಮರಳಿ ಕಳುಹಿಸುತ್ತಿದ್ದರು. ದೇವನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಯಾವಾಗಲೂ ಕೆಲಸ ನಡೆಯುತ್ತದೆ ಎಂಬುದರ ಬಗ್ಗೆ ನನ್ನ ಯೋಚನೆ ಹೋಯಿತು. 'ನನ್ನನ್ನು ಮರಳಿ ಕಳುಹಿಸದಿದ್ದರೆ ನನ್ನ ದೇಶಕ್ಕೆ ಹೋಗುವ ಟಿಕೆಟ್‌ಗೆ ಸಮನಾದ ಹಣವನ್ನು ದೇವನ ಮಾರ್ಗದಲ್ಲಿ ನೀಡುವೆನು' ಎಂದು ನಾನು ಪ್ರತಿಜ್ಞೆ ಮಾಡಿದೆ. ಕೊನೆಗೆ ನನ್ನನ್ನು ಬಿಡಲಾಯಿತು ಮತ್ತು ನಾನು ನನ್ನ ವಾಗ್ದಾನದಂತೆ ಈ ಹಣವನ್ನು ನೀಡುತ್ತಿದ್ದೇನೆ."

ಅಲ್ಲಾಹನ ಕೃಪೆಯಿಂದ ತಹ್ರೀಕ್ ಜದೀದ್‌ನ 92ನೇ ವರ್ಷವು ಅಕ್ಟೋಬರ್ 31ರಂದು ಕೊನೆಗೊಂಡಿತು. ಈಗ ನವೆಂಬರ್ 1ರಿಂದ 93ನೇ ವರ್ಷ ಪ್ರಾರಂಭವಾಗಿದೆ ಮತ್ತು ಜಮಾಅತ್ ಈ ಕಳೆದ ವರ್ಷದಲ್ಲಿ ತಹ್ರೀಕ್ ಜದೀದ್‌ನ ಅಡಿಯಲ್ಲಿ 2 ಕೋಟಿ 2 ಲಕ್ಷ 80 ಸಾವಿರ ಮಿಲಿಯನ್ ಪೌಂಡ್‌ಗಳ ತ್ಯಾಗ ಮಾಡುವ ಸೌಭಾಗ್ಯವನ್ನು ಪಡೆದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 7 ಲಕ್ಷ 27 ಸಾವಿರ ಪೌಂಡ್‌ಗಳಷ್ಟು ಹೆಚ್ಚಳವಾಗಿದೆ. ಚಂದಾ ನೀಡುವವರ ಸಂಖ್ಯೆಯಲ್ಲೂ ಕಳೆದ ವರ್ಷಕ್ಕೆ ಹೋಲಿಸಿದರೆ 46,616 ರಷ್ಟು ಹೆಚ್ಚಳವಾಗಿದೆ.

ಹುರ್ಝೂರ್ ಒಟ್ಟು ಸಂಗ್ರಹದ ಆಧಾರದ ಮೇಲೆ ಮೊದಲ ಹತ್ತು ದೇಶಗಳ ಸ್ಥಾನವನ್ನು ಪ್ರಸ್ತಾಪಿಸಿದರು, ಅದರಲ್ಲಿ ಬ್ರಿಟನ್ ಮೊದಲ ಸ್ಥಾನದಲ್ಲಿದೆ. ನಂತರ ಭಾರತದ ಹತ್ತು ರಾಜ್ಯಗಳ ಸ್ಥಾನವನ್ನು ಹೇಳಿದರು. ಅವು ಅನುಕ್ರಮವಾಗಿ ಹೀಗಿವೆ: ಕೇರಳ, ತಮಿಳುನಾಡು, ತೆಲಂಗಾನ, ಒಡಿಶ, ಕರ್ನಾಟಕ, ಜಮ್ಮು ಕಾಶ್ಮೀರ, ಪಂಜಾಬ್, ಬಂಗಾಳ, ಮಹಾರಾಷ್ಟ್ರ ಮತ್ತು ಉತ್ತರಪ್ರದೇಶ. ಭಾರತದ ಹತ್ತು ಜಮಾಅತ್‌ಗಳ ಸ್ಥಾನಗಳು ಅನುಕ್ರಮವಾಗಿ ಹೀಗಿವೆ: ಹೈದರಾಬಾದ್,

ಕೊಯಮತ್ತೂರು, ಖಾದಿಯಾನ್, ಕ್ಯಾಲಿಕಟ್, ಮೇಲಪಾಳಯಮ್, ಬೆಂಗಳೂರು, ಕೇರಂಗ್, ಕರುಳಾಯಿ, ಕಲ್ಕತ್ತಾ ಮತ್ತು ಕಣ್ಣೂರು ಟೌನ್.

ಹುಝೂರ್ ಹೇಳಿದರು: ತಹ್ರೀಕ್ ಜದೀದ್‌ನ ಚಂದಾಗಳಿಂದ ಆಫ್ರಿಕಾದ 7,601 ಮಸೀದಿಗಳು, 2,400 ಮಿಷನ್ ಹೌಸ್‌ಗಳು ಮತ್ತು ಮುಬಲ್ಲಿಗರ ಹಾಗೂ ಮುಅಲ್ಲಿಮರ ಖರ್ಚುಗಳನ್ನು ಭರಿಸಲಾಗುತ್ತದೆ. 'ನುಸ್ರತ್ ಜಹಾನ್ ಸ್ಕೀಮ್' ಅಡಿಯಲ್ಲಿ 13 ದೇಶಗಳಲ್ಲಿ 620 ಶಾಲೆಗಳು ಮತ್ತು 14 ದೇಶಗಳಲ್ಲಿ 41 ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳು ಸೇವೆ ಸಲ್ಲಿಸುತ್ತಿವೆ. ಇದಲ್ಲದೆ ವಿಶ್ವವಿದ್ಯಾಲಯಗಳು, ವಿದ್ಯಾರ್ಥಿವೇತನಗಳು, 26 ರೇಡಿಯೋ ಸ್ಟೇಷನ್‌ಗಳು, ಎಂ.ಟಿ.ಎ ಸ್ಟುಡಿಯೋಗಳು ಮತ್ತು ವಿಶ್ವದ ವಿವಿಧ ದೇಶಗಳಲ್ಲಿ ತಬ್ಲೀಗ್ ಹಾಗೂ ಶೈಕ್ಷಣಿಕ ಯೋಜನೆಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ. ಈ ಎಲ್ಲ ಮಹತ್ತಾದ ಸೇವೆಗಳು ಜಮಾಅತಿನ ಸದಸ್ಯರ ನಿಷ್ಠಾವಂತ ಆರ್ಥಿಕ ತ್ಯಾಗಗಳಿಂದ ನಡೆಯುತ್ತಿವೆ, ಅವರ ಸೀಮಿತ ಸಂಪನ್ಮೂಲಗಳಿಂದ ಅಸಾಧಾರಣ ಫಲಿತಾಂಶಗಳು ಲಭಿಸುತ್ತಿವೆ.

ತಹ್ರೀಕ್ ಜದೀದ್ ಮತ್ತು ಇತರ ಕೇಂದ್ರೀಯ ಚಂದಾಗಳ ಮೂಲಕ ಜಮಾಅತಿನ ಖರ್ಚುಗಳನ್ನು ಪೂರೈಸಲಾಗುತ್ತದೆ, ಇದು ಸದಸ್ಯರ ನಿಷ್ಠಾವಂತ ತ್ಯಾಗಗಳು ಮತ್ತು ಅಲ್ಲಾಹನ ಕೃಪೆಯಿಂದ ಸಾಧ್ಯ. ಅಲ್ಲಾಹನು ಎಲ್ಲ ತ್ಯಾಗ ಮಾಡುವವರ ಸಂಪತ್ತು ಮತ್ತು ಕುಟುಂಬದಲ್ಲಿ ಸಮೃದ್ಧಿಯನ್ನು ಕರುಣಿಸಲಿ ಮತ್ತು ಅವರಿಗೆ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸಲಿ. ಆಮೀನ್.

————————*****————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ○ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

Friday Sermon delivered by Hadrath Khaleefatul Masih Al Khamis*(atba)*

At, ***'Masjid Mubarak',*** *Islamabad, Tilford,* U.K. On 06-11-2026

Summarized by *Majlis Ansarullah Bharat*

Kannada Translation*:* Moulavi Inamullah for Kannada Desk, Qadian

Published By*:* Kannada Isha'at Team for Nazarath Nashr-O-Isha'ath, Qadian

Email**:** *khutuba.kannada@gmail.com*

You can find all the Sermons archived at: www.alislam.org/friday-sermon